ಹಾಸನದ 3 ನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ

ಎಸ್.ಸಿ. 7 /2016

| | | | |
|---|---|---|---|
| ಸಾಕ್ಷಿದಾರರ ಹೆಸರು | : ಸಾವಿತ್ರಮ್ಮ | ಪಿಡಬ್ಲ್ಯೂ | 3 |
| ತಂದೆಯ/ಗಂಡನ ಹೆಸರು | : ಆರ್ ಕೃಷ್ಣಮೂರ್ತಿ | ಸಿಡಬ್ಲ್ಯೂ | 3 |
| ವಯಸ್ಸು | : 63 | ದಿನಾಂಕ: | 22-06-2019 |
| ಕಸುಬು | : ನಿವೃತ್ತ ಶಿಕ್ಷಕರು | ಸಾಕ್ಷಿದಾರರಿಗೆ ಪ್ರಮಾಣವಚನ | |
| ವಾಸ | : ಹಾಸನ | ಬೋಧಿಸಲಾಯಿತು | |

ಮುಖ್ಯ ವಿಚಾರಣೆ - ಸರ್ಕಾರಿ ಅಭಿಯೋಜಕರಿಂದಃ- ಅಭಿಯೋಜನೆಯ ಪರವಾಗಿಃ-

ಫ್ರಾಸಾ 1 ನನ್ನ ಮೈದುನ. ಫ್ರಾಸಾ 2 ನನ್ನ ಪತಿ. ನಾನು 2001 ರಿಂದ ನಿವೃತ್ತಿಯಾಗುವರೆವಿಗೂ ಜಕ್ಕನಹಳ್ಳಿಯ ಸರ್ಕಾರಿ ಶಾಲೆಯಲ್ಲಿ ಶಿಕ್ಷಕಕಿಯಾಗಿ ಸೇವೆ ಸಲ್ಲಿಸಿರುತ್ತೇನೆ. ನಾನು ಬೆಳಿಗ್ಗೆ 9-30 ಕ್ಕೆ ಮನೆ ಬಿಟ್ಟು ಸಂಜೆ 5-30 ಕ್ಕೆ ಮನೆಗೆ ವಾಪಸ್ ಬರುತ್ತಿದ್ದೆನು. ಸದರಿ ಸಾಲಿನಲ್ಲಿ ನಾನು ಕಿತ್ತಾನೆಯ ತೋಟದ ಮನೆಯಲ್ಲಿ ನಾನು , ನನ್ನ ಪತಿ , ಮತ್ತು ನನ್ನ ಮೈದುನ ವಾಸವಾಗಿದ್ದೆವು. ಸದರಿ ತೋಟ ಮತ್ತು ಮನೆ ಚಾಸಾ 4 ರವರಿಗೆ ಸೇರಿತ್ತು. ಚಾಸಾ 4 ಆ ವೇಳೆಗೆ ಹಾಸನದಲ್ಲಿ ವಾಸವಾಗಿದ್ದರು. ಫ್ರಾಸಾ 1 ಸದರಿ ತೋಟದ ಮನೆಯಲ್ಲಿದ್ದು ಹಸುಗಳನ್ನ ಸಾಕಿಕೊಂಡು ಹಾಲನ್ನು ಡೈರಿಗೆ ಹಾಕುತ್ತಿದ್ದರು.

ದಿಃ 07-05-15 ರ ರಾತ್ರಿ ತೋಟದ ಮನೆಯಲ್ಲಿ ನಾನು , ಫ್ರಾಸಾ 1 ಮತ್ತು 2 ಮಲಗಿದ್ದೇವು. ಮಾರನೇ ದಿನ ಮನೆಯಲ್ಲಿ ಪೂಜೆ ಇದ್ದ ಕಾರಣ 35,000/- ರೂ ತೆಗೆಸಿಕೊಂಡು ಮನೆಯಲ್ಲಿಟ್ಟಿದ್ದೆನು ಮತ್ತು ಸದರಿ ಘಟನೆಗಿಂತ ಮೊದಲು 20,000/- ರೂ ಎಲ್ ಐ ಸಿ ಹಣ ಬಂದಿತ್ತು ಒಟ್ಟು 55,000/- ರೂ ಹಣವನ್ನು ಮನೆಯಲ್ಲಿಟ್ಟಿದ್ದೆನು. ಮಧ್ಯರಾತ್ರಿ 1-30 / 2 ರ ಸುಮಾರಿಗೆ ನಾನು ಮತ್ತು ಫ್ರಾಸಾ 2 ಕೋಣೆಯಲ್ಲಿ ಮಲಗಿದ್ದೆವು. ಫ್ರಾಸಾ 1 ಸದರಿ ಮನೆಯ ಹಾಲ್ ನಲ್ಲಿ ಮಲಗಿದ್ದ. ಮೂರು ಜನ ನಮ್ಮ ರೂಮಿನೊಳಗೆ ಬಂದಿದ್ದರು ಸದರಿಯವರ ಕೈನಲ್ಲಿ ಟರ್ಚ್ ಇತ್ತು ನನ್ನ ಬಳಿ ಇದ್ದ ಟರ್ಚ್ ನ್ನ ಸಹಾ ಕಿತ್ತುಕೊಂಡರು. ನಾನು ಸದರಿ ಅಸಾಮಿಗಳನ್ನ ನೋಡಿ ಮೈದುನನ್ನ ಕರೆದೆ ಆದರೆ ಮೈದುನ ಬರಲಿಲ್ಲ ಏಕೆಂದರೆ ಮೈದುನನ್ನ ಮೂರು ಜನ ಹಿಡಿದುಕೊಂಡಿದ್ದ ವಿಷಯ ನಂತರ ಗೊತ್ತಾಯಿತು. ಸದರಿ ಮೂರು ಜನ ಅಸಾಮಿಗಳು ತಾವು ತಂದಿದ್ದ ಕಬಿಬಣದ ರಾಡಿನಿಂದ ಅಲೆಮೆರಾವನ್ನು ಒಡೆದು ಅದರೊಳಗಿದ್ದ ಎಲ್ಲಾ ಹಣವನ್ನು ಮತ್ತು ಒಟ್ಟು 35 ತೊಲ ಚಿನ್ನದ

ಅಭರಣವನ್ನ ಬಾಕ್ಸ್ ನಲ್ಲಿದ್ದನ್ನು ತೆಗೆದುಕೊಂಡು ಸದರಿ ಬಾಕ್ಸ್ ನ್ನು ಅಲ್ಲೇ ಬಿಟ್ಟು ಸದರಿ ಚಿನ್ನದ ಅಭರಣವನ್ನ ಸದರಿ ಅಸಾಮಿಗಳ ಪೈಕಿ ಒಬ್ಬ ತನ್ನ ಶರ್ಟ್ ನೊಳಗೆ ಹಾಕಿಕೊಂಡ. ಆ ವೇಳೆಗೆ ನನ್ನ ಪಕ್ಕದಲ್ಲಿದ್ದ ಪತಿ ಫ್ರಾಸಾ 2 ರವರ ಕುತ್ತಿಗೆ ಬಳಿ ಮಚ್ಚನ್ನು ಹಿಡಿದುಕೊಂಡು ಇಬ್ಬರು ಹಿಡಿದುಕೊಂಡಿದ್ದರು ಆ ವೇಳೆಗೆ ನಾನು ಸದರಿ ಅಸಾಮಿಗಳಿಗೆ ನನ್ನನ್ನು ಕೊಲೆ ಮಾಡಿ ಆದರೆ ಫ್ರಾಸಾ 1 ಮತ್ತು 2 ರವರನ್ನ ಬದುಕಿಸಿ ಏಕೆಂದರೆ ಅವರು ನನ್ನ ಪಿಂಚಣಿಯಿಂದ ಜೀವನ ಸಾಗಿಸುವರು ಎಂದು ಬೇಡಿಕೊಂಡೆ. ಸದರಿ ಅಸಾಮಿಗಳ ಪೈಕಿ ಒಬ್ಬನು ನನ್ನ ಕೊರಳಿನಲ್ಲಿದ್ದ ಚಿನ್ನದ ತಾಳಿಯನ್ನ ಕಿತ್ತುಕೊಳ್ಳಲು ಬಂದ ನಾನು ಸದರಿ ಅಸಾಮಿಗೆ ತಾಳಿ ಬಿಟ್ಟು ಸರ ತೆಗೆದುಕೋ ಅಂತ ಕೋರಿಕೊಂಡಿದ್ದರಿಂದ ಅವರು ತಂದು ಮಚ್ಚಿನಿಂದ ತಾಳಿಯನ್ನ ಬೇಪರ್ಡಿಸಿ ಎರಡು ತಾಳಿಯನ್ನ ಮತ್ತು 04 ಗುಂಡನ್ನ ಬಿಟ್ಟು ಚಿನ್ನದ ಸರ ಕಿತ್ತುಕೊಂಡರು. ಸದರಿ ಕೋಣೆಯಲ್ಲಿ ಇನ್ನು 03 ಅಲ್ಮೆರಾಗಳಿದ್ದು ಅವುಗಳ ಕೀಲಿ ಹಾಕಿರಲಿಲ್ಲ ಏಕೆಂದರೆ ಅದರಲ್ಲಿ ಬೆಲೆಬಾಳುವ ಯಾವ ವಸ್ತುಗಳು ಇರಲಿಲ್ಲ. ನಾನು ಗಾಬರಿಯಲ್ಲಿದ್ದೆ ಸದರಿ ಬೀರುಗಳ ಕೀ ಕೊಡುತ್ತೇನೆಂದರು ಕೇಳದೆ ಸದರಿ ರಾಡಿನಿಂದ ಒಂದು ಬೀರ್ ನ್ನ ಒಡೆದರು. ಇನ್ನೆರೆಡು ಬೀರುಗಳನ್ನ ಒಡೆಯಲಿಲ್ಲ ಏಕೆಂದರೆ ಅವುಗಳಿಗೆ ಬೀಗ ಹಾಕಿರಲಿಲ್ಲ. ನಂತರ ನನಗೆ ಗೊತ್ತಾಗಿದ್ದು ಏನೆಂದರೆ ಸದರಿ ಅಸಾಮಿಗಳ ಪೈಕಿ ಒಬ್ಬ ಕೊಟ್ಟಿಗೆ ಕಿಟಕಿ ಜಾಲರಿಯನ್ನ ಮುರಿದು ಒಳಗೆ ಬಂದು ನಂತರ ಹಿಂದಿನ ಬಾಗಿಲು ತೆರೆದ ಅದರ ಮೂಲಕ ಮನೆಯೊಳಗೆ ಅಂದರೆ ಅಡುಗೆ ಕೋಣೆ ಮೂಲಕ ನಮ್ಮ ಕೋಣೆಗೆ ಬಂದಿರುವರು ಅಂತ ಗೊತ್ತಾಯಿತು. ನಂತರ ಅವರು ಇನ್ನೊಂದು ಬಾಗಿಲು ಮೂಲಕ ಹೋಗಿರುವರು ಅಂತ ತಿಳಿದು ಬಂದಿತು. ನಮ್ಮ ಮನೆಯೊಳಗೆ ನುಗ್ಗಿ ದರೋಡೆ ಮಾಡಿದ ಅಸಾಮಿಗಳು ತಂದ ಟರ್ಚ್ ನ ಬೆಳಕಿನಲ್ಲಿ ನೋಡಿರುತ್ತೇನೆ. ಸದರಿ ಅಸಾಮಿಗಳು ನಮ್ಮ ಮನೆಯಿಂದ ಹಣ ಮತ್ತು ಚಿನ್ನಾಭರಣದ ಜೊತೆ , ಬೆಳ್ಳಿಯ ವಸ್ತುಗಳನ್ನ ಸಹಾ ದೋಚಿಕೊಂಡು ಹೋಗಿದರು. ಫ್ರಾಸಾ 1 ರ ಬಳಿಯಿಂದ ಏನೆಲ್ಲಾ ವಸ್ತುಗಳನ್ನ ದೋಚಿಕೊಂಡು ಹೋದರು ಅಂತ ಈಗ ಹೇಳಲು ನನಗೆ ನೆನೆಪಿಲ್ಲ. ಸದರಿ ಘಟನೆಯಾದ 03 ತಿಂಗಳ ಬಳಿಕ ಪೋಲೀಸರು ಫ್ರಾಸಾ 1, 2 ಮತ್ತು ನಾನು ಹಾಗೂ ಸಂಬಂಧಿಕರು ಹೋಗಿದ್ದೆವು. ಠಾಣೆಯಲ್ಲಿ 07 ಜನ ಅಸಾಮಿಗಳಿದ್ದರು. ಸಾಕ್ಷಿ ನ್ಯಾ . ಮುಂದಿರುವ 5 ನೇ ಆರೋಪಿಯನ್ನ ಗುರುತಿಸಿ ಸದರಿ ಅಸಾಮಿ ನಮ್ಮ ರೂಮಿನೊಳಗೆ ಬಂದು ನನ್ನ ಪಕ್ಕದಲ್ಲಿಯೇ ನಿಂತಿದ್ದು ನನ್ನ ಚಿನ್ನದ ಸರವನ್ನ ತೆಗೆದುಕೊಂಡು ಅದರಲ್ಲಿದ್ದ ಎರಡು ತಾಳಿಯನ್ನ ಮತ್ತು 04 ಗುಂಡನ್ನ ಸರದಿಂದ ತುಂಡರಿಸಿ ಅವುಗಳನ್ನ ನನಗೆ ಕೊಟ್ಟು ಚಿನ್ನದ ಸರವನ್ನ ತೆಗೆದುಕೊಂಡ. ಸಾಕ್ಷಿ ಪುನಃ ನ್ಯಾ ದ ಮುಂದಿರುವ 3 ನೇ ಆರೋಪಿಯನ್ನ

ಗುರುತಿಸಿ ಘಟನೆ ಕಾಲದಂದು 3 ನೇ ಆರೋಪಿ ನಮ್ಮ ಕೋಣೆಯಲ್ಲಿದ್ದ ಅವನಿಗೆ 05 ನೇ ಆರೋಪಿ ತುಂಡರಿಸಿದ ಚಿನ್ನದ ಸರವನ್ನ ನೀಡಿದ್ದ ಎನ್ನುತ್ತಾರೆ. ಸಾಕ್ಷಿ ನ್ಯಾಮುಂದಿರುವ 1 ನೇ ಆರೋಪಿಯನ್ನ ಗುರುತಿಸಿ ಆತ ಆಚೆ ಇದ್ದ ಅಂತ ಗೊತ್ತಾಯಿತು ಎನ್ನುತ್ತಾರೆ. ಇನ್ನುಳಿದ ಅಸಾಮಿಗಳನ್ನ ತೋರಿಸಿದಲ್ಲಿ ಅವರನ್ನ ಗುರುತಿಲಸುವುದಾಗಿ ಸಾಕ್ಷಿ ನುಡಿದರು. ಆದರೆ ಪ್ರಸ್ತುತ ಪ್ರಕರಣದಲ್ಲಿ 2 ನೇ ಆರೋಪಿ ತಲೆಮರೆಸಿಕೊಂಡಿದ್ದು ಆತನ ವಿರುದ್ದ ಎಸ್ ಸಿ 71/18 ಪ್ರಕರಣ ದಾಖಲಾಗಿರುತ್ತದೆ. ಮತ್ತು 6 ನೇ ಆರೋಪಿ ಸಹಾ ಜಾಮೀನಿನ ಕರಾರನ್ನು ಉಲ್ಲಂಘಿಸಿದ್ದರಿಂದ ಆತನ ವಿರುದ್ದವು ಎಸ್ ಸಿ 127/18 ಪ್ರಕರಣ ದಾಖಲಾಗಿದ್ದು ಆತನು ಸಹಾ ಇಂದು ನ್ಯಾ. ಕ್ಕೆ ಗೈರುಹಾಜರಾಗಿರುವನು. ಅವನನ್ನು ತೋರಿಸಿದ್ದಲ್ಲಿ ಗುರುತಿಸುವುದಾಗಿ ನುಡಿದರು. ನಂತರ ಕೆಲವು ದಿನಗಳ ನಂತರ ನಾನು ಠಾಣೆಯಿಂದ 125 ಗ್ರಾಂ ಚಿನಾಭರಣಗಳನ್ನ ಬಿಡಿಸಿಕೊಂಡು ಬಂದಿರುತ್ತೇನೆ. ಸದರಿ ಆಭರಣಗಳನ್ನ ಇಂದು ನ್ಯಾ .ಕ್ಕೆ ತಂದಿರುವುದಿಲ್ಲ ಏಕೆಂದರೆ ಸೇಫ್ ಲಾಕರ್ ನಲ್ಲಿಟ್ಟಿದ್ದೆನು. ಸಾಕ್ಷಿ ನಿಪಿ 3 ರಲ್ಲಿಯ ಆಭರಣವನ್ನ ನೋಡಿ ಗುರುತಿಸಿದರು. ಸಾಕ್ಷಿ ನ್ಯಾ . ಮುಂದಿರುವ ತಮ್ಮ ಮನೆಯಿಂದ ತೆಗೆದುಕೊಂಡು ಹೋದ ಎಂ ಒ 2 ನ್ನ ನೋಡಿ ಗುರುತಿಸಿದರು. ಸಾಕ್ಷಿ ಎಂ ಒ 3 ಚಾಕುವನ್ನ ನೋಡಿ ಗುರುತಿಸಿದರು.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.

**(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ.ಸ.ಇದೆ.**

**(ಚಂದ್ರಶೇಖರ್ ಮರಗೂರ್)**

**3 ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರು,**

**ಹಾಸನ.**